ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 4, Jan-Feb 2022, Pp.100-104.
©IIMRD, Mysuru

IIMRD JOURNALS

www.iimrd.com

# ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ ಪೂರ್ವರಂಗ ಕೃತಿಯ ಒಂದು ಅವಲೋಕನ

**ತಿಪ್ಪಣ್ಣ ಬ. ಕಂಬಾಗಿ[1] ಮತ್ತು ಡಾ.ಪಿ. ನಾಗರಾಜ[2]**

[1]ಸಂಶೋಧನಾ ವಿದ್ಯಾರ್ಥಿ; ಸಹಾಯಕ ಪ್ರಾಧ್ಯಾಪಕರು[2]

ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

## ಸಾರಾಂಶ (Abstract)

*ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಪಾತ್ರ ವಹಿಸಿದ ವ್ಯಕ್ತಿಯೆಂದರೆ ಅದು ಸರ್ವಜ್ಞ, ವಚನ ಎಂಬುವ ಸಾಹಿತ್ಯಿಕ ಪ್ರಕಾರದಲ್ಲಿ ಅನೇಕ ತ್ರಿಪದಿಗಳನ್ನು ರಚಿಸಿ ಜನರ ಜೀವನದ ಮೇಲೆ ಅನುಭಾವಿಕವಾಗಿ ಪ್ರಭಾವ ಬೀರಿದ್ದಾನೆ. ತ್ರಿಪದಿಗಳ ಮೂಲಕ ತನ್ನ ಸಂದೇಶವನ್ನು ನೀಡಿದ ಸರ್ವಜ್ಞನು ಕನ್ನಡ ನಾಡಿನುದ್ದಗಲಕ್ಕೂ ಮನೆ ಮಾತಾದ ವ್ಯಕ್ತಿ. ಕೇವಲ ಒಂದೇ ವಿಷಯವನ್ನು ಇಟ್ಟುಕೊಂಡು ನಡೆದವನಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ಮಾತಿಲ್ಲ' ಎಂಬ ನಾಣ್ಣುಡಿ ಜನಮಾನಸದಲ್ಲಿ ಅಚ್ಚೊತ್ತಿರುವುದು ಸರ್ವಜ್ಞನ ಶ್ರೇಷ್ಠತೆಯನ್ನು ತಿಳಿಸುತ್ತದೆ. ಪ್ರಸ್ತುತ ಲೇಖನದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ ಪೂರ್ವರಂಗ ಕೃತಿಯ ಕುರಿತು ವಿಮರ್ಶಿಸಲಾಗಿದೆ.*

**ಮುಖ್ಯಪದಗಳು (Keywords):** *ಪೂರ್ವರಂಗ ಕೃತಿ, ಅವಲೋಕನ, ಸರ್ವಜ್ಞ, ತ್ರಿಪದಿಗಳು, ಲೌಕಿಕತೆ.*

**ಪೀಠಿಕೆ**

ಸರ್ವಜ್ಞನ ಜ್ಞಾನಸಾಗರ ಎಷ್ಟಿದೆ ಎಂದು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಕೃತಿ **"**ಪೂರ್ವರಂಗ**"** ಸರ್ವಜ್ಞನ ಕುರಿತಾಗಿ ತಿಳಿಸುವ ಒಂದು ಅಪೂರ್ವ ಗ್ರಂಥವಾಗಿದೆ. ಇದು ಅವರು ವಿಜಯವಾಣಿ ಪತ್ರಿಕೆಯಲ್ಲಿ ಬರೆದ ಅಂಕಣಗಳ ಒಂದು ಸರಣಿಯ ಒಟ್ಟು ವಿಷಯವಾಗಿದೆ. ಈ ಗ್ರಂಥವನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಎರಡು ಭಾಗಗಳಾಗಿ ವಿಭಾಗಿಸಿದ್ದಾರೆ. ಅವುಗಳೆಂದರೆ:–

1. ಶಿವ ಪರ್ವ
2. ಲೋಕ ಪರ್ವ

ಶಿವಪರ್ವ ಎಂಬ ಮೊದಲ ಭಾಗದಲ್ಲಿ ಆಧ್ಯಾತ್ಮ, ಪಾರಮಾರ್ಥ, ಶಿವಯೋಗ ಮತ್ತು ಶಿವ ಸ್ವರೂಪಕ್ಕೆ ಸಂಬಂಧಿಸಿದ ಲೇಖನಗಳಿವೆ. ಎರಡನೇ ಭಾಗದಲ್ಲಿ ಲೌಕಿಕ ವಿಷಯಗಳ ಕುರಿತು ಲೇಖನಗಳಿವೆ.

*Please cite this article as: ತಿಪ್ಪಣ್ಣ ಬ. ಕಂಬಾಗಿ ಮತ್ತು ಡಾ.ಪಿ. ನಾಗರಾಜ. (2022). ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಅವರ ಪೂರ್ವರಂಗ ಕೃತಿಯ ಒಂದು ಅವಲೋಕನ. ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ.100–104.*

**ಶಿವ ಪರ್ವ:–** “ಅನುಭಾವಿಗಳು ಹೇಳುವಂತೆ ಲೋಕದ ಸುಖವು ಕ್ಷಣಿಕವಾದದ್ದು, ಅದಕ್ಕಿಂತ ಮಿಗಿಲಾಗಿರುವುದು ಮತ್ತೊಂದಿದೆ. ಅದನ್ನು ತಿಳಿದರೆ ಇದನ್ನು ತಿಳಿದಂತೆ” ಎನ್ನುವ ಮಾತು ಲೌಕಿಕ ಸುಖವು ಕೇವಲ ಕ್ಷಣಿಕ ಸುಖ ಕೊಡುತ್ತದೆ. ಆದರೆ ಪಾರಮಾರ್ಥಿಕ ಸುಖ ಮನಸ್ಸಿಗೆ ಆನಂದವನ್ನು ಶಾಶ್ವತವಾಗಿ ನೀಡುತ್ತದೆ. ಇದನ್ನು ಸರ್ವಜ್ಞನು ತನ್ನ ವಚನಗಳ ಮೂಲಕ ಜನರಿಗೆ ತಿಳಿಸಿದ್ದಾನೆ.

ಆತ್ಮಗಂಗೆಯ ಮಿಂದು ಜ್ಯೋತಿರ್ಲಿಂಗವ ಕಂಡು
ಪಾತಾಕಕೋಟಿ ಹರೆವುದು ಶುದ್ಧ ಪರ
ಮಾತ್ಮನೆಯಕ್ಕು ಸರ್ವಜ್ಞ (ಪೂರ್ವ ರಂಗ–ಪು.ಸಂ.5)

ಸರ್ವಜ್ಞ ಎಂಬ ಹೆಸರು ತುಂಬಾ ವ್ಯಾಪಕವಾದದ್ದು, ಇದು ತತ್ವದ ಒಂದು ಸಂಕೇತ. ಅನೇಕ ವಿದ್ವಾಂಸರ ಪ್ರಕಾರ ಸರ್ವಜ್ಞ ಎಂಬುವುದು ಅವನ ಹೆಸರಲ್ಲ ಅದು ಅವನ ಗುರುವಿನ ಅಥವಾ ಇಷ್ಟದೇವನ ಸಂಕೇತವೆಂದು, ಸರ್ವಜ್ಞನೇ ಹೇಳುವಂತೆ ಸರ್ವಜ್ಞನೋರ್ವ ಜಗಕ್ಕೆಲ್ಲ ಕರ್ತಾರ. ಅವರ ಒಂದು ವಚನ ಹೀಗಿದೆ;

“ಸರ್ವಜ್ಞನೆಂಬುವನು ಗರ್ವದಿಂದಾವನೆ
ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯ
ಪರ್ವತವೇ ಆದ ಸರ್ವಜ್ಞ (ಪೂರ್ವರಂಗ ಪು.ಸಂ.4)

ಗುರುವಿನ ಬಗ್ಗೆ ಸರ್ವಜ್ಞನ ಅಭಿಪ್ರಾಯವು ತುಂಬಾ ಉನ್ನತವಾದದ್ದು. ಗುರುವನ್ನು ದೈವದ ಜೊತೆಗೆ ಹೋಲಿಸುತ್ತಾನೆ. ಬದುಕಿಗೆ ನೂತನ ದಾರಿಯನ್ನು ತೋರಿಸುವವನೇ ಗುರು. ಸರ್ವಜ್ಞನು ಒಂದು ವಚನದಲ್ಲಿ ಹೀಗೆ ಹೇಳಿದ್ದಾನೆ.

ದರುಶನವಾರರಿಂ ಪುರುಷರು ಮೂವರಿಂ
ಪರತತ್ವವು ಬೇರೆಂದು ತೋರಿದ
ಗುರುತಾನೆ ದೈವ–ಸರ್ವಜ್ಞ!! (ಪೂರ್ವರಂಗ. ಪು.ಸಂ.8)

ಆರು ದರ್ಶನಗಳು ಮತ್ತು ಬ್ರಹ್ಮ, ವಿಷ್ಣು, ಮಹೇಶ್ವರರಿಗಿಂತ ಪರತತ್ವ ಬೇರೊಂದಿದೆ. ಅದನ್ನು ತೋರಿಸುವವನೇ ಗುರು. ಅವನೇ ನಿಜವಾದ ದೈವ ಎಂಬುದು ಸರ್ವಜ್ಞನ ವಿಚಾರವಾಗಿದೆ. ಈ ಅಧ್ಯಾಯದಲ್ಲಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಅವರು ಗುರು–ಶಿಷ್ಯರ ಬಗ್ಗೆ ಅನೇಕ ಉದಾಹರಣೆಗಳನ್ನು ನೀಡಿ ವಿವರಿಸಿದ್ದಾರೆ.

ನಂತರದಲ್ಲಿ ದೈವತ್ವದ ಕಲ್ಪನೆ ಬಗ್ಗೆ ಚರ್ಚಿಸುತ್ತ ಸರ್ವಜ್ಞನ “ಲಿಂಗ ಪದ್ಧತಿ”ಯಲ್ಲಿ ಆಕಾರವಿಲ್ಲದ, ಗುಣವಿಲ್ಲದ, ಪರಬ್ರಹ್ಮನ ಬಗ್ಗೆ ಚಿಂತಿಸುವುದನ್ನು ಇಲ್ಲಿ ವಿವರಿಸಲಾಗಿದೆ. ಪ್ರಾಚೀನ ಸಂಸ್ಕೃತಿಯಿಂದ ದೈವತ್ವದ ಕಲ್ಪನೆ ಬ್ರಹ್ಮ, ವಿಷ್ಣು, ಮಹೇಶ್ವರರ ಕುರಿತು ಸರ್ವಜ್ಞನು ತನ್ನ ವಚನದಲ್ಲಿ ಈ ರೀತಿ ಹೇಳುತ್ತಾನೆ.

ದೇಶಕ್ಕೆ ಸಜ್ಜಾನನ್ನು ಹಾಸ್ಯಕ್ಕೆ ಹನಮಂತ
ಕೇಶವ ಭಕ್ತರೊಳಗೆಲ್ಲಾ ಮೂರು
ಕಣ್ಣೇಶನೆ ದೈವ– ಸರ್ವಜ್ಞ!! (ಪೂರ್ವರಂಗ. ಪು.ಸಂ.9)

ಶಿವನನ್ನು ಸರ್ವಜ್ಞನು ಅನೇಕ ತ್ರಿಪದಿಗಳಲ್ಲಿ ನೆನೆದಿದ್ದಾನೆ. ಸರ್ವಜ್ಞನು ಶಿವನ ಭಕ್ತನು ಮತ್ತು ಅವನಲ್ಲಿ ತನ್ನ ತನವನ್ನು ಕಂಡವನಾಗಿದ್ದಾನೆ.

"ಮಾಯಾ ಮೋಹವ ಮೆಚ್ಚಿ
ಕಾಯಕವನ್ನು ಕರಗಿಸುವಂತೆ ಆಯಾಸಗೊಳ್ಳುತ
ಇರಬೇಡ, ಓಂ ನಮ ಶಿವಾಯಯೆಂದೆನ್ನಿ"–ಸರ್ವಜ್ಞ!! (ಪೂರ್ವರಂಗ, ಪು.ಸಂ.28)

ಶಿವ ಸಾಕ್ಷಾತ್ಕಾರದಲ್ಲಿ ಸರ್ವಜ್ಞ ಸಾಧಕ ಜೀವಿ. ಅವನು ಪ್ರತಿಯೊಂದು ಸ್ಥೂಲವನ್ನು ಏರಿದವನು. ಅವನಿಗೆ ಪ್ರತಿಯೊಂದು ಸ್ಥೂಲವು ಗಮ್ಯಕ್ರಮವೆ ಅದು ಅವನಿಗೆ ಅನುಭವಗತವೂ ಹೌದು. ತದ್ಗತವೂ ಹೌದು. ಅವನು ಹೇಳುವಂತೆ;

ಮಲಯಜದ ತುರದೊಳಗೆ ಸಲೆಗಂಧವಿಪ್ಪಂತೆ
ಸುಲಲಿತವೂ ಆದ ಶರಣರ ಹೃದಯದಲ್ಲಿ
ನೆಲೆಸಿಹನು –ಸರ್ವಜ್ಞ!! (ಪೂರ್ವರಂಗ. ಪು.ಸಂ.30)

ಇದರರ್ಥವು ಮಲಯ ಪರ್ವತದಲ್ಲಿ ನಿಭೀಡವಾದ ಮರಗಳುಂಟು. ಪುರಾಣಗಳಲ್ಲಿ ಮಲಯ ಪರ್ವತಗಳ ವರ್ಣನೆ ಬರುತ್ತದೆ. ಇಂತಹ ಪ್ರದೇಶದಲ್ಲಿ ಹುಟ್ಟುವ ಮರಗಳಿಗೆ ಸಹಜವಾಗಿಯೇ ಸುಗಂಧವಿರುತ್ತದೆ. ಅದು ಪೃಥ್ವಿಯ ನೆವದಲ್ಲಿ ಬಂದ ಸುಗಂಧ ಶಾಸ್ತ್ರದಲ್ಲಿ "ಗಂಧವತ ಪೃಥಿವಿ" ಎಂದು ಹೇಳುವುದುಂಟಷ್ಟೆ. ಈ ಭುಮಿಗೆ ಸಹಜವಾದ ಸುಗಂಧವಿದೆ. ಅದರಲ್ಲೂ ಮಲಯ ಪರ್ವತಗಳಲ್ಲಿ ಇನ್ನೂ ಸುಗಂಧವುಂಟು. ಅದರಂತೆ ಶರಣರ ಹೃದಯದಲ್ಲಿ "ಶಿವನಾಮ" ಎಂಬ ಸುಗಂಧವೇ ತುಂಬಿದೆ. ಸುಗಂಧಯುಕ್ತ ಮರಗಳಲ್ಲಿ ಸುಗಂಧವು ನೆಲೆಗೊಳ್ಳುವಂತೆ ಶಿವನು ಶರಣರ ಬಳಿ ಬಂದು ನೆಲೆಗೊಳ್ಳುತ್ತಾನೆ. ಶಿವನ ಸಂಚಾರದ ಫಲವು ಮನುಜನ ಮನಸ್ಸನ್ನು ತಿಳಿಗೊಳಿಸುತ್ತದೆ. ಆದ್ದರಿಂದ ಶಿವನು ಆತ್ಮದ ಜೊತೆಗೆ ನಿರಂತರವಾಗಿ ಇರುತ್ತಾನೆ.

**ಲೋಕ ಪರ್ವ**:– ಸರ್ವಜ್ಞನು ಶಿವ ತತ್ವವನ್ನು ಸಾರುವುದರ ಜೊತೆಗೆ ಲೋಕದ ಆಗು–ಹೋಗುಗಳ ಬಗ್ಗೆ ಅಪಾರ ಕಾಳಜಿಯುಳ್ಳ ವ್ಯಕ್ತಿ. ಲೌಕಿಕ ಪ್ರಪಂಚದ ಬಗ್ಗೆ ಸರ್ವಜ್ಞನು ತುಂಬಾ ಪರಿಣಾಮಕಾರಿಯಾಗಿ ವಚನಗಳಲ್ಲಿ ಹೇಳಿದ್ದಾನೆ. ಪ್ರೊ. ಮಲ್ಲೇಪುರಂ ಅವರ 'ಪೂರ್ವರಂಗ' ಕೃತಿಯಲ್ಲಿ ಬರುವ ಲೋಕ ಪರ್ವವು ಸರ್ವಜ್ಞನ ಲೌಕಿಕ ಜಗತ್ತಿನ ಬಗ್ಗೆ ಇರುವ ನೋಟವನ್ನು ತೋರಿಸುತ್ತದೆ. ಸರ್ವಜ್ಞನ ಕಾಲವು ರಾಜಾಡಳಿತದ ಕಾಲವಾದುದರಿಂದ ಸರ್ವಜ್ಞನು ಆ ಕಾಲದ ಕಲಿಗಳು ಮತ್ತು ರಾಜರ ಬಗ್ಗೆ ಅನೇಕ ವಚನಗಳನ್ನು ಹೇಳಿದ್ದಾನೆ. ರಾಜನಿಗೆ ಸೈನಿಕರಾದವರು ತಮ್ಮ ಜೀವವನ್ನು ನೀಡಲು ಹಿಂಜರಿಯಬಾರದು. ರಾಜರು ದೇವರ ಸಮಾನ ಎಂಬ ಭಾವನೆಯು ಸರ್ವಜ್ಞ ಅಲ್ಲಗಳೆದಿಲ್ಲ. ಸೈನಿಕರು ಯಾವತ್ತೂ ಸಾವಿಗೆ ಹೆದರಬಾರದು.

ಅವರು ರಾಜ್ಯ ಮತ್ತು ರಾಜನ ರಕ್ಷಣೆ ಮಾಡಬೇಕು. ಅದು ಅವರ ಕರ್ತವ್ಯ. ಸಾವಿಗೆ ಹೆದರಿ ಹಿಂಜರಿಯುವವರು ಹೇಡಿಗಳು ಎಂಬುವುದು ಸರ್ವಜ್ಞನ ನಿಲುವಾಗಿದೆ. ಸರ್ವಜ್ಞನು ಒಂದು ವಚನದಲ್ಲಿ ಈ ರೀತಿಯಾಗಿ ಹೇಳಿದ್ದಾನೆ.

ಜಾತಿವೀರರು ಸಾವಭೀತಿಗಂಜುವರೆ?

'ಜಾತಸ್ಯ ಮರಣಂ ಧ್ರುವಂ' ಎಂಬ ಶ್ರತಿಯಿರಲು

ಎತಕಂಜುವುದು ಸರ್ವಜ್ಞ!! (ಪೂರ್ವರಂಗ. ಪು.ಸಂ.77)

ಅದೇ ರೀತಿ ರಾಜನಾದವನು ಉತ್ತಮ ಆಡಳಿತಗಾರನಾಗಿರಬೇಕು. ಜನರ ಧ್ವನಿಯನ್ನು ಆಲಿಸಬೇಕು ಎಂಬುವುದು ರಾಜನ ಬಗ್ಗೆ ಅನೇಕ ವಚನಗಳಲ್ಲಿ ಸರ್ವಜ್ಞನು ಹೇಳಿದ್ದಾನೆ. ಸರ್ವಜ್ಞನು ನಾಡು–ನುಡಿಗಳ ಬಗೆಗೆ ಆಲೋಚಿಸುತ್ತಿರುವಾಗಲೇ ಆಳುವವರ ಬಗ್ಗೆ ಆಲೋಚಿಸುತ್ತಾನೆ. ದೇಹಕ್ಕೆ ಪ್ರಾಣ ಎಷ್ಟು ಮುಖ್ಯವೋ? ದೇಶಕ್ಕೆ ನೀತಿ–ನಿಯಮಗಳು, ನಾಡಿಗೆ ಒಬ್ಬ ರಾಜನು ಅಷ್ಟೇ ಮುಖ್ಯ ಎಂಬುದು ಸರ್ವಜ್ಞನ ಅಭಿಪ್ರಾಯವಾಗಿದೆ. ರಾಜನಾದವನು ತನ್ನ ರಾಜ್ಯದಲ್ಲಿರುವ ರೈತರ, ಸೈನಿಕರ, ಬಡವರ ಜೊತೆಗೆ ಹೇಗಿರಬೇಕೆಂಬುದನ್ನು ಸರ್ವಜ್ಞ ವಚನಗಳಲ್ಲಿ ಹೇಳಿದ್ದಾನೆ. ಅರಸನಾದವನ ಆಡಳಿತವು ಉತ್ತಮವಾಗಿದ್ದರೆ, ರಾಜ್ಯವೂ ಪ್ರಗತಿಯನ್ನು ಹೊಂದುವುದು ಇಲ್ಲವಾದರೆ ಹಾಳಾಗುವುದು ಎಂಬುದು ಸರ್ವಜ್ಞನ ಇಂಗಿತವಾಗಿದೆ.

ಸರ್ವಜ್ಞನು ದಾನದ ಬಗ್ಗೆ ಚರ್ಚೆ ಮಾಡಿದ್ದಾನೆ. "ದಾನ ಪದ್ಧತಿ" ಮತ್ತು "ದಾನಹೀನ ಪದ್ಧತಿ" ಎಂಬೆರೆಡು ಪದ್ಧತಿಗಳಲ್ಲಿ ದಾನ ಪದ್ಧತಿಗೆ ಮಹತ್ವ ನೀಡಿದ್ದಾನೆ.

ಅನ್ನವನ್ನಿಕ್ಕುವುದು ನನ್ನಿಯನುಡಿಯುವುದು

ತನ್ನಂತೆ ಪರರ ಬಗೆವುದು ಕೈಲಾಸ

ಬಿನ್ನಾಣವಕ್ಕು ಸರ್ವಜ್ಞ!! ಪೂರ್ವರಂಗ. ಪು.ಸಂ.96)

ಸರ್ವಜ್ಞನು ನಿಜಾಂಶಗಳನ್ನು ಕಂಡವನು. ಅವನು ಬದುಕಿದ ಮಧ್ಯಕಾಲೀನ ಕರ್ನಾಟಕದ ಸುತ್ತಮುತ್ತಲಿನ ಬದುಕನ್ನು ಆಳವಾಗಿ ನೋಡಿದವನು. ಸಾಮಾನ್ಯ ಜನರ ಬದುಕು–ಬವಣೆಗಳನ್ನು ಕಣ್ಣಾರೆ ನೋಡುತ್ತ ನೈಜ ರೀತಿಯಲ್ಲೇ ಪ್ರತಿಕ್ರಿಯಿಸಿದ್ದು ಸರ್ವಜ್ಞನ ವೈಶಿಷ್ಟ್ಯ. ಸರ್ವಜ್ಞನು ಮನುಷ್ಯನ ಲೋಭ ಜೀವನದ ಬಗ್ಗೆ ಬಹಳ ಮಾರ್ಮಿಕವಾಗಿ ಹೇಳಿದ್ದಾನೆ.

ಇದ್ದದನ್ನು ಬಿಟ್ಟು ಹೊರಗಿದುದನ್ನು ಬಯಸುತ್ತಲೆ

ಇದ್ದು ಉಣದಿಪ್ಪ ಬಾಯೊಳಗೆ ಕತ್ತೆಯಾ

ಲದ್ದಿಯೇ ಬೀಳ್ಗು ಸರ್ವಜ್ಞ!! (ಪೂರ್ವರಂಗ. ಪು.ಸಂ.100)

ಮನುಷ್ಯನಿಗೆ ಆಸೆಯು ಎಲ್ಲ ಗುಣಗಳಿಗಿಂತ ಹೆಚ್ಚಾಗಿಯೇ ಇರುತ್ತದೆ. ಅದು ಬೇಕು ಇದು ಬೇಕು ಎಂಬ ಲೋಭ ಜೀವನವು ಇರುವುದನ್ನು ಕಳೆದುಕೊಳ್ಳುವಂತೆ ಮಾಡುತ್ತದೆ ಎಂಬುದು ಸರ್ವಜ್ಞನ ಹೇಳಿಕೆಯಾಗಿದೆ.

ಸರ್ವಜ್ಞನು ನೀತಿ ಮಾರ್ಗದ ಬಗ್ಗೆ ಅನೇಕ ವಚನಗಳನ್ನು ರಚಿಸಿದ್ದಾನೆ. ಅವುಗಳಲ್ಲಿ "ರಾಜನೀತಿ", "ಪ್ರಜಾನೀತಿ" ಎಂಬ ಬಗೆಯೂ ಆತನ ವಚನಗಳಲ್ಲಿ ಕಾಣಬಹುದಾಗಿದೆ. ಸ್ತ್ರೀಯರನ್ನು ಸರ್ವಜ್ಞನು ಅಚ್ಚರಿಯಿಂದ ನೋಡಿದ್ದಾನೆ. ಆಕೆಯ ಕೋಪವನ್ನು ಕಂಡಂತೆ ಪರಾವತಾರದ ರೂಪವನ್ನು ಕಂಡಿದ್ದಾನೆ. ಹೆಣ್ಣು ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸ್ತರಗಳಲ್ಲಿ ಚಲಿಸುವ ಬಗೆಗಳನ್ನು ಸರ್ವಜ್ಞನು ತನ್ನ ವಚನಗಳಲ್ಲಿ ನಿರೂಪಿಸಿದ್ದಾನೆ.

ಹರಿಯ ಉರವನು ಮೆಟ್ಟಿ! ಹರನ ಶಿರವನ್ನೇರಿ
ಸರಸಿಜೋದ್ಭವನ ಮೊರೆಗೆಡಿಸಿ ಕಾಡಿದಳು
ಹಿರಿಯರಿನ್ನಾರು ಸರ್ವಜ್ಞ!! !! (ಪೂರ್ವರಂಗ. ಪು.ಸಂ.120)

ಈ ರೀತಿ ಹೆಣ್ಣಿನ ಹಿರಿತನವನ್ನು ತನ್ನ ವಚನಗಳಲ್ಲಿ ಸರ್ವಜ್ಞನು ಹೇಳಿದ್ದಾನೆ. ಭೂಮಿಯ ಬಗ್ಗೆ ಬಹಳ ತಾರ್ಕಿಕವಾಗಿ ಹೇಳುವ ಸರ್ವಜ್ಞನು

ನಡೆಯುವುದೊಂದೇ ಭೂಮಿ ಕುಡಿಯುವುದೊಂದೇ ನೀರು
ಸುಡುವಡೆ ಕಿಚ್ಚ ಏರಡಿಲ್ಲ ಜಗವೆಲ್ಲ
ಜಡಗೊಂಬುತಿದೆಕೊ ಸರ್ವಜ್ಞ!! (ಪೂರ್ವರಂಗ. ಪು.ಸಂ.129)

**ಉಪಸಂಹಾರ**

ಸರ್ವಜ್ಞನು ಲೋಕವನ್ನು ತನ್ನ ದೃಷ್ಟಿಯಲ್ಲಿ ತಿಳಿದು ಅದಕ್ಕೆ ತನ್ನದೇ ಆದ ಅರ್ಥವನ್ನು ನೀಡಿದ್ದಾನೆ. ಅವರ ಲೌಕಿಕ ಜ್ಞಾನವು ಸಾಮಾನ್ಯವಾದುದಲ್ಲ. ಮನುಷ್ಯನ ಪ್ರತಿಯೊಂದು ಸ್ತರದಲ್ಲೂ ಅವನು ಅಧ್ಯಯನ ನಡೆಸಿದ್ದಾನೆ ಎನ್ನಬಹುದು. ಆದ್ದರಿಂದಲೇ ಕವಿಗಳು ಅವನನ್ನು "ಆಡು ಮುಟ್ಟದ ಸೊಪ್ಪಿಲ್ಲ; ಸರ್ವಜ್ಞ ಹೇಳದ ವಿಷಯವಿಲ್ಲ" ಎಂದಿರುವುದು. ಪೂರ್ವರಂಗ ಕೃತಿಯಲ್ಲಿ ಸರ್ವಜ್ಞನ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದ ನಿಲುವುಗಳನ್ನು ಸರಿಯಾಗಿ ತಿಳಿಸುವುದರ ಜೊತೆಗೆ ಲೋಕ ಜ್ಞಾನದ ಅರಿವನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ನೀಡಿದ್ದಾರೆ.

**ಪರಾಮರ್ಶನ ಗ್ರಂಥಗಳು**

- ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ. (2017). ಪೂರ್ವರಂಗ. ಸಂವಹನ ಪಬ್ಲಿಕೇಷನ್ಸ್, ಮೈಸೂರು.